# ಅವಧಿಪೂರ್ವ ಮಗುವಿಗೆ ಎದೆಹಾಲೇ ಅಮೃತ

**ಅನೇಕ ಕಾರಣಗಳಿಗೆ ನವಜಾತ ಶಿಶುಗಳು ಅವಧಿಪೂರ್ವವಾಗಿ ಜನಿಸುತ್ತವೆ. ಇಂಥ ಮಕ್ಕಳಿಗೆ ಎದೆಹಾಲೊಂದೇ ಸೂಕ್ತ ಆಹಾರ. ಬಾಣಂತಿಯರಲ್ಲಿ ಎದೆಹಾಲಿನ ಕೊರತೆ ಇದ್ದಾಗ ಅವಧಿಪೂರ್ವ ಮಕ್ಕಳು ಉಳಿವಿಗಾಗಿ ಹೋರಾಟ ನಡೆಸಬೇಕಾಗುತ್ತದೆ. ಇಂಥ ಮಕ್ಕಳಿಗೆ ವರದಾನವಾಗಿ ಪರಿಣಮಿಸಿದೆ ಬೆಂಗಳೂರಿನಲ್ಲಿರುವ 'ಅಮಾರ' ಎಂಬ ಎದೆಹಾಲಿನ ಬ್ಯಾಂಕ್.**

**ಉಮಾ ಅನಂತ್**

ಚಿತ್ರಗಳು: ರಂಜು ಪಿ.



ಬೆಂಗಳೂರಿನ ಶ್ವೇತಾ ಕಾಮತ್ ಗರ್ಭಿಣಿಯಾದಾಗ ಮನೆಯಲ್ಲಿ ಸಂತಸ, ಸಂಭ್ರಮ ಮುಗಿಲು ಮುಟ್ಟಿತ್ತು. ಮನೆಗೆ ಬರುವ ಹೊಸ ಅತಿಥಿಗಾಗಿ ಎಲ್ಲರಲ್ಲೂ ಕಾತರ. ಮಡಿಲು ತುಂಬಿ ಒಂಬತ್ತು ತಿಂಗಳು ಚೆನ್ನಾಗಿ ಆರೈಕೆ ಮಾಡಬೇಕು ಎಂಬ ಹಂಬಲ ಅತ್ತೆ ಹಾಗೂ ಆಕೆಯ ತಾಯಿಯದು. ಆದರೆ ಶ್ವೇತಾಗೆ ಏಳು ತಿಂಗಳು ತುಂಬಿ ಎಂಟಕ್ಕೆ ಬೀಳುವುದರೊಳಗೆ ಮಗು ಗರ್ಭದೊಳಗಿಂದ ಹೊರಗೆ ಬರುವ ಅವಸರ ಮಾಡಿತ್ತು!. ಕೇವಲ 31 ವಾರಗಳಲ್ಲೇ ಹುಟ್ಟಿದ ಮಗುವಿಗೆ ಸರಿಯಾದ ಬೆಳವಣಿಗೆಯೂ ಆಗಿರಲಿಲ್ಲ. ತೂಕವೂ ಬರೀ 1.5 ಕೇಜಿ ಇತ್ತು. ಅದಕ್ಕಿಂತಲೂ ಮಿಗಿಲಾಗಿ ಶ್ವೇತಾಗೆ ಎದೆಹಾಲು ಕೊರತೆ ಕಾಣಿಸತೊಡಗಿತ್ತು. ಮಗುವನ್ನು 'ಅವಧಿಪೂರ್ವ ಮಗುವಿನ ತುರ್ತುಚಿಕಿತ್ಸಾ ಘಟಕ (ಎನ್‌ಐಸಿಯು)ನಲ್ಲಿ ಇಡಬೇಕಾಗಿತ್ತು. ಪೌಷ್ಟಿಕಾಂಶದ ತೀವ್ರ ಕೊರತೆಯಿಂದ ಮಗು ಉಳಿವಿಗಾಗಿ ಹೋರಾಟವನ್ನೇ ನಡೆಸಬೇಕಾಗಿತ್ತು. ಈ ಸಂದರ್ಭದಲ್ಲಿ ಆಕೆಗೆ ನೆರವಿಗೆ ಬಂದದ್ದು ಬೆಂಗಳೂರಿನ 'ಅಮಾರ' ಎಂಬ ಎದೆಹಾಲು ಪೂರೈಸುವ ಸಂಸ್ಥೆ. ಮೂರು ವಾರಗಳ ಕಾಲ ಎನ್‌ಐಸಿಯು ನಲ್ಲಿ ದಾನಿ ತಾಯಿಯಿಂದ ಪಡೆದ ಎದೆಹಾಲು ಕುಡಿದ ಮಗು ಆರೋಗ್ಯಪೂರ್ಣವಾಗಿ ಆಸ್ಪತ್ರೆಯಿಂದ ಮನೆಗೆ ತೆರಳಿತು.

***

ದೀಪಿಕಾ ರಾಘವೇಂದ್ರ ಅವರಿಗೆ ಹುಟ್ಟಿದ್ದು ಅವಳಿ ಮಕ್ಕಳು; ಅದೂ 7ನೇ ತಿಂಗಳಿನಲ್ಲೇ ಹೆರಿಗೆ. ಅವಧಿಪೂರ್ವವಾಗಿ ಮಕ್ಕಳು ಜನಿಸಿದ ಕಾರಣ ದೀಪಿಕಾ ಅವರ ಎದೆಹಾಲು ಒಂದು ಮಗುವಿಗೆ ಮಾತ್ರ ಸಾಕಾಗುತ್ತಿತ್ತು. ಇನ್ನೊಂದು ಮಗುವಿಗೆ ಎದೆಹಾಲಿಗಾಗಿ ಅವರು ಮೊರೆಹೋದದ್ದು ಮಿಲ್ಕ್‌ಬ್ಯಾಂಕ್ ಅನ್ನು. ಹೌದು, ಅವಧಿಪೂರ್ವ ಜನಿಸಿದ ಅದೆಷ್ಟೋ ಮಕ್ಕಳಿಗೆ ಬೆಂಗಳೂರಿನ ಫೋರ್ಟಿಸ್ ಲಾ ಫೆಮ್ಮೆ ಆರಂಭಿಸಿದ 'ಅಮಾರ' ಎದೆಹಾಲು ಬ್ಯಾಂಕ್ ಒಂದು ವರದಾನ.

## ಅವಧಿಪೂರ್ವ ಮಗು ಏಕೆ ಜನಿಸುತ್ತದೆ?

ತಾಯಿಯ ಗರ್ಭದಿಂದ ಮಗು ಅವಧಿಪೂರ್ವ (ಪ್ರಿಮೆಚ್ಯೂರ್) ವಾಗಿ ಜನಿಸಲು ಕಾರಣಗಳು ಹಲವಾರು. ಗರ್ಭಧಾರಣೆ ಸಮಯದಲ್ಲಿ ತಾಯಿಯ ಆರೋಗ್ಯ ಏರುಪೇರು, ಗರ್ಭಿಣಿಯ ಉಪಚಾರ ಸರಿಯಾಗಿ ಮಾಡದೇ ಇರುವುದು, ಕಾಲಕಾಲಕ್ಕೆ ಸೂಕ್ತ ಚುಚ್ಚುಮದ್ದು ತೆಗೆದುಕೊಳ್ಳದೇ ಇರುವುದು, ಡಯಾಬಿಟಿಸ್, ಹೈಪರ್‌ಟೆನ್ಶನ್‌ನಂತಹ ಸಮಸ್ಯೆ, ಗರ್ಭಿಣಿಯರಲ್ಲಿ ಅತಿಯಾಗಿ ತೂಕ, ಅತಿ ಹೆಚ್ಚು ಕಾಫಿ ಚಹ ಸೇವನೆ, ಧೂಮಪಾನ ಮದ್ಯಪಾನದಂತಹ ಚಟ.. ಇವೇ ಮುಂತಾದವು. ಜತೆಗೆ ಮಗು ಜನಿಸುವ ಸಮಯದಲ್ಲಿ ಗರ್ಭಾಶಯದಲ್ಲಿ ನೀರು ಕಡಿಮೆಯಾಗಿರುವುದು, ಮಗುವಿನ ಕರುಳಬಳ್ಳಿ ಕುತ್ತಿಗೆಗೆ ಸುತ್ತಿಕೊಂಡಿರುವುದು... ಇವೇ ಕಾರಣಗಳಿಗೆ ಮಗು ಅವಧಿಪೂರ್ವವಾಗಿ ಹುಟ್ಟುತ್ತವೆ. ಬಹುತೇಕ ಸಂದರ್ಭಗಳಲ್ಲಿ ಸಿಸೇರಿಯನ್ ಹೆರಿಗೆಯೂ ಅನಿವಾರ್ಯವಾಗುತ್ತದೆ. ಆಗ ತಾಯಿಯಲ್ಲಿ ಎದೆಹಾಲು ಉತ್ಪಾದನಾ ಪ್ರಮಾಣ ಕಡಿಮೆಯಾಗುತ್ತದೆ. ಕೃತಕ ಅಥವಾ ಹಸುವಿನ ಹಾಲು ಕುಡಿಸಿದರೆ ಮಗುವಿಗೆ ಅಪಾಯ ತಪ್ಪಿದ್ದಲ್ಲ. ಅಲ್ಲದೆ ಬಾಣಂತಿಯರಲ್ಲಿ ಎದೆಹಾಲು ಉತ್ಪತ್ತಿ ಆಗಿದ್ದರೂ ಸೋಂಕು ಇದ್ದರೆ ಮಗುವಿಗೆ ಎದೆಹಾಲು ಕುಡಿಸಲಾಗದು. ಹೀಗಾಗಿ ಅನಿವಾರ್ಯವಾಗಿ ಇಂಥ ಮಕ್ಕಳಿಗೆ ದಾನಿ ತಾಯಂದಿರ ಎದೆಹಾಲನ್ನೇ ಕುಡಿಸಬೇಕಾಗುತ್ತದೆ.

'ತಾಯಿಯ ಗರ್ಭದಲ್ಲಿ ಒಂಬತ್ತು ತಿಂಗಳು ಬೆಳೆದು ಜನಿಸಿದ ಮಗು ಆರೋಗ್ಯಪೂರ್ಣವಾಗಿರುತ್ತದೆ. ಈ ಮಗುವಿಗೆ ಒಂದು ವೇಳೆ ಹಸುವಿನ

### ಸಮೀಕ್ಷೆ ಸಾಬೀತು

ಭಾರತದಲ್ಲಿ ಅವಧಿಪೂರ್ವ ಜನನ ಮತ್ತು ಕಡಿಮೆ ತೂಕ ನವಜಾತ ಶಿಶುಗಳ ಸಾವಿಗೆ ಮುಖ್ಯ ಕಾರಣ ಎಂಬುದು ಆತಂಕಕಾರಿ ವಿಷಯ. ನವಜಾತ ಶಿಶುಗಳ ಸಾವಿಗೆ ಅವಧಿಪೂರ್ವ ಜನನವೇ ಕಾರಣ ಎಂಬುದನ್ನು ಇತ್ತೀಚೆಗಿನ ಸಮೀಕ್ಷೆ ಸಾಬೀತುಪಡಿಸಿದೆ. ವಿಶ್ವ ಆರೋಗ್ಯ ಸಂಸ್ಥೆ ಮತ್ತು ಯುನೆಸೆಫ್ ಸಹ ತಾಯಿಯ ಎದೆಹಾಲೇ ಮಗುವಿಗೆ ಅತ್ಯುತ್ತಮ ಆಹಾರ ಎಂಬುದನ್ನು ಪ್ರಮಾಣೀಕರಿಸಿದೆ. ಇದು ತಾಯಿಯ ಹಾಲೇ ಆಗಿರಬಹುದು ಅಥವಾ ಬೇರೆ ಆರೋಗ್ಯವಂತ ತಾಯಿಯ ಹಾಲಾಗಿರಬಹುದು ಎಂಬುದನ್ನೂ ಸ್ಪಷ್ಟಪಡಿಸಿದೆ.